ಶ್ರೀ ಆರ್.ವಿ. ದೇಶಪಾಂಡೆ:- ಒಂದು ಕಡೆ ನೀವು 20 ದಿವಸದಲ್ಲಿ ಮಾಡುತ್ತೇವೆ ಎಂದು ಹೇಳಿದ್ದೀರಿ, ಆದರೆ ಮತ್ತೊಂದು ಕಡೆ ಈ ರೀತಿ ಆಗುತ್ತಿದೆ. ಆದುದರಿಂದ caution ಮಾಡುತ್ತಿದ್ದೇನೆ.

Sri. M. Veerappa Moily :- Our strategy will not depend on one or two Officers. It is a Government's will power to catch these people. There is no question about it. Therefore, we are not bothered.

ಶ್ರೀ ವಾಟಾಳ್ ನಾಗರಾಜ್:- ತಾವು ಅವನನ್ನು 20 ದಿವಸದಲ್ಲಿ ಹಿಡಿಯುತ್ತೇವೆ ಎಂದು ಹೇಳಿದ್ದೀರಿ. ನಮಗೆ ಸಂಶಯವಾಗುತ್ತಿದೆ, ನೀವು ಎಲ್ಲಾದರೂ ಅವನನ್ನು ಹಿಡಿದು ಇಟ್ಟಿದ್ದೀರೋ ಏನೋ ಎಂದು. ನೀವು ಎಲ್ಲದರೂ ಇಟ್ಟಿದ್ದರೆ 20ನೇ ತಾರೀಖು ಅದನ್ನು ಹೊರಗಡೆ ಬಿಡತಕ್ಕಂಥ ವ್ಯವಸ್ಥೆ ಇದೆಯೇ? ಅದನ್ನು ಹೇಳಿ. ಏಕೆಂದರೆ ಹಿಂದೆ ಬಂದಂತಹ ಮಂತ್ರಿಮಂಡಲಗಳೆಲ್ಲವೂ ಕೂಡ ವೀರಪ್ಪನ್‌ನನ್ನು ಇನ್ನು 3 ತಿಂಗಳನಲ್ಲಿ, ಇನ್ನು 2 ತಿಂಗಳಿನಲ್ಲಿ, ಇನ್ನು 15 ದಿವಸದಲ್ಲಿ ಹಿಡಿಯುತ್ತೇವೆ ಎಂದು ಹೇಳಿಕೊಂಡು ಬರುತ್ತಿದ್ದಾರೆ.

ಉಪಾಧ್ಯಕ್ಷರು:- ತಾವು ನನಗೆ ಹೇಳಿದ್ದುದು ಬಾಂಬ್ ಬಗ್ಗೆ ಮಾತನಾಡುತ್ತೇನೆ ಎಂದು. ಆದರೆ ಈಗಾಗಲೇ ತಾವು ವೀರಪ್ಪನ್ ಬಗ್ಗೆ ಹಿಡಿದುಕೊಂಡು ಹೋಗಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ, ಅದಕ್ಕೂ ಇದಕ್ಕೂ ಸಂಬಂಧ ಇದೆ. ಈಗ ಅಕಸ್ಮಾತ್ ಬಾಂಬ್ ಹಾಕುವುದಕ್ಕೆ ಮೈಸೂರಿಗೆ ವೀರಪ್ಪನ್ ಬಂದಿರಬಹುದು. ನೀವು ಆಗ ಏನು ಮಾಡುತ್ತೀರಿ.

ಶ್ರೀ ಕಾಗೋಡು ತಿಮ್ಮಪ್ಪ:- ವಾಟಾಳ್ ನಾಗರಾಜ್‌ರವರನ್ನೇ ಕೊಡಿ, ಅಲ್ಲಿ ವೀರಪ್ಪನ್ ಹಿಡಿಯುವುದಕ್ಕೆ.

ಶ್ರೀ ವಾಟಾಳ್ ನಾಗರಾಜ್:- ಆಗಬಹುದು, ನಾನು ಕೇಳಿದಂತಹ ಎಲ್ಲಾ ಸವಲತ್ತುಗಳನ್ನು ಕೊಟ್ಟು ನೀವು ಹಾಕುವುದಾದರೆ ನಾನು ಒಪ್ಪುತ್ತೇನೆ. ಎಲ್ಲಾ ಕೊಟ್ಟರೆ ನಾನು ಹೋಗುವುದಕ್ಕೆ ರೆಡಿ ಇದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಕಂ ಆನ್ ಚಾಲೆಂಜ್.

ಶ್ರೀ ವಾಟಾಳ್ ನಾಗರಾಜ್:- ತಾವು ಏಕೆ ಹಾಗೆ ಕೂಗಿಕೊಳ್ಳುತ್ತೀರಿ, ಸ್ವಲ್ಪ ನಿಧಾನವಾಗಿ ಹೇಳಿ.

ತಿಮ್ಮಪ್ಪನವರು ಏತಕ್ಕೆ ಈ ರೀತಿ ಕೂಗಿಕೊಳ್ಳುತ್ತಾರೊ ಗೊತ್ತಿಲ್ಲ. ಏತಕ್ಕೆ ಕೂಗಿಕೊಳ್ಳಬೇಕು? ತಾವು ಹೇಳಿರುವ ಬಗ್ಗೆ ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಬಹಳ ಸಿಟ್ಟು ಬರುತ್ತಿದೆ.

ಶ್ರೀ ವಾಟಾಳ್‌ನಾಗರಾಜ್:- ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ನಾನೇನು ಕೇಳುತ್ತೇನೆ, ಎಲ್ಲಾ ವ್ಯವಸ್ಥೆಮಾಡಿಕೊಡಲಿ. ಅದನ್ನು ನಾನು ಮಾಡುತ್ತೇನೆ. ನಾನು ಆ ರೀತಿ ಹಿಂದಕ್ಕೆ ಹೋಗುವುದಕ್ಕೆ ನಾನು ತಯಾರಾಗಿಲ್ಲ. ಈ ರಾಜ್ಯದ ಹಿತದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ನಾನು ಎಂಥ ಕೆಲಸ ಮಾಡುವುದಕ್ಕೆ ಸಿದ್ಧ ಎನ್ನತಕ್ಕಂಥದ್ದನ್ನು ತಿಮ್ಮಪ್ಪನವರಿಗೆ ಹೇಳುತ್ತಿದ್ದೇನೆ.

(2)ಚಿತ್ರದುರ್ಗ ಜಿಲ್ಲೆಯಲ್ಲಿ ಕಾಲರ.

ಶ್ರೀ ಹೆಚ್.ಏಕಾಂತಯ್ಯ:- ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಇವತ್ತು ಪುನಃ ಚಿತ್ರದುರ್ಗದಲ್ಲಿ ಇವತ್ತು ಬೆಳಿಗ್ಗೆ ಇಬ್ಬರು ಸತ್ತಿದ್ದಾರೆ. ಎಷ್ಟು ಗಂಭೀರವಾಗಿದೆ ಎಂದು ಹೇಳಿದರೆ 2660 ಜನರಿಗೆ ಕಾಲರಾ ತಗುಲಿದ್ದು ನಾಲ್ಕುನೂರು ಇಪ್ಪತ್ತೆರಡು (422) ಹಳ್ಳಿಗಳಲ್ಲಿ ಈ ಕಾಲರಾ ತಗುಲಿದೆ ಎಂದು

ತಮ್ಮ ಅಧಿಕೃತವಾದಂಥ ಟಿಪ್ಪಣಿ ಇವತ್ತಿನ ದಿವಸ ಯು.ಎನ್.ಐ.ನಲ್ಲಿ ಬಂದಿದೆ. ಇಲ್ಲಿ ಮುಖ್ಯವಾದ ಒಂದು ವಿಚಾರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ ಈ ಆಸ್ಪತ್ರೆ ಮತ್ತು ಲ್ಯಾಬೋರೇಟರಿಯಲ್ಲಿರುವಂಥ ತಮ್ಮ ನೌಕರ ಸಿಬ್ಬಂದಿಯವರು ಏನು ಇದ್ದಾರೆ, ಇವತ್ತಿನ ದಿವಸ ಜನರಲ್ಲಿ ಗುಮಾನಿ ಬಂದಿದೆ. ಇದು ಕಾಲರಾ ಅಲ್ಲ ಎಂದು ಸರ್ಟಿಫಿಕೇಟ್ ಕೊಡುತ್ತಾರೆ. ನಮ್ಮ ದೇಶದ ಪಟ್ಟಭದ್ರ ಹಿತಾಸಕ್ತಿಗಳು ಎಷ್ಟು ಮುಂದೆ ಹೋಗಿವೆ ಎಂದರೆ ತಮ್ಮ ಗಮನಕ್ಕೆ ತರುವುದಾದರೆ ಲ್ಯಾಬೊರೇಟರಿಯಲ್ಲಿ gastro enteritis ಎಂದು ಬರೆಯಿಸುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ ಎಂದು ನನಗೆ ಖಚಿತವಾಗಿ ತಿಳಿದುಬಂದಿದೆ. ಕಾಲರಾ ಎಂದು ಒಂದು ಹಂತದಲ್ಲಿ ಹೇಳುತ್ತಾರೆ. ಮತ್ತೆ ಅತ್ತ gastro enteritis ಎಂದು ಹೇಳುತ್ತಾರೆ. ಮತ್ತು ನಿಮ್ಮ ಅಂಗಡಿಗಳನ್ನು ಮತ್ತು ಬೇರೆ ಬೇರೆ ಸಂತೆಗಳನ್ನು ನಿಲ್ಲಿಸಿ ಎಂದು ಹೇಳಿದರೆ ಇಲ್ಲ ಕಾಲರಾ ಇಲ್ಲ ಎಂದು ಅಧಿಕಾರಿಗಳೇ ಹೇಳಿಕೊಂಡು ಇವತ್ತಿನ ದಿವಸ ಕಾಲರಾ ವ್ಯಾಪಕವಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಹಬ್ಬುತ್ತಿದೆ. ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತಾದರೂ ಸಹಾ ಸೂಕ್ತವಾದ ಕ್ರಮ ತೆಗೆದುಕೊಳ್ಳದಿದ್ದರೆ ಇದು ಇನ್ನೂ ಗಂಭೀರವಾಗುತ್ತದೆ. ನಾನು ಆಗಲೇ ಮೊನ್ನೆ ತಮಗೆ ಹೇಳಿದೆ. ತಾವು ಹೇಳಿದ ಮೇಲೆ ಈಗ ಔಷಧಿ ಬಂದಿದೆ. ಇಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ ಇವತ್ತು ಅಲ್ಲಿ ಎಷ್ಟು ಸಾಕಾದಷ್ಟು ಸಿಬ್ಬಂದಿ ಇಲ್ಲ ಮತ್ತು ಔಷಧಿ ಸಹಾ ಇಲ್ಲ. ಇವತ್ತಿನ ಯುಎನ್ಐ ರಿಪೋರ್ಟ್ ಪ್ರಕಾರ ಸುಮಾರು 2660 ಜನರಿಗೆ ಕಾಲರಾ ತಗುಲಿದೆ, 422 ಹಳ್ಳಿಗಳಲ್ಲಿ 9 ತಾಲ್ಲೂಕುಗಳಲ್ಲಿ ಇದೆ ಎನ್ನು ಮಾತನ್ನು ತಮ್ಮ ಅಧಿಕೃತ ವಕ್ತಾರರು ಹೇಳಿದ್ದಾರೆ. ದಯವಿಟ್ಟು ಇದನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಇದಕ್ಕೆ ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಅವರನ್ನು ಪ್ರಾರ್ಥಿಸುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಮುಖ್ಯಮಂತ್ರಿಗಳೇ in addition to this ಮಂಗನ ಕಾಯಿಲೆ ಬಹಳ ಸ್ಪೆಡ್ ಆಗುತ್ತಿದೆ. ಇದು ತಮಗೆ ಗೊತ್ತಿದೆ. ಇದೇನು ಹೊಸ ಕಾಯಿಲೆ ಅಲ್ಲ. ಪ್ರತಿ ವರ್ಷ ಈ ಸಮಸ್ಯೆ ಬರುತ್ತದೆ. ತೀರ್ಥಹಳ್ಳಿಯಲ್ಲಿ ನಾಲ್ಕು ಜನ ತೀರಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ಇವತ್ತು ನನಗೆ ಮೆಸೇಜ್ ಬಂತು, ನಾರ್ತ್ ಕೆನರಾದಲ್ಲಿ ಹೊನ್ನಾವರದಲ್ಲಿ ಸ್ವಲ್ಪ ಸ್ಪೆಡ್ ಆಗಿ ಡೆತ್ ಆಗಿದೆ ನನಗೆ ಮೆಸೇಜ್ ಬಂದಿದೆ. ಆದರ ಬಗ್ಗೆ ಇಮ್ಮಿಡಿಯೇಟ್‌ಲಿ ಔಷಧಿ ಮದ್ದು ಹಾಕಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ.ವೀರಪ್ಪಮೊಯಿಲಿ(ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಮಾನ್ಯ ಏಕಾಂತಯ್ಯನವರು ತಾವು ಸಲಹೆ ಕೊಟ್ಟಪ್ರಕಾರ ನಾವು ಮದ್ದೆಲ್ಲಾ ಒದಗಿಸಿದ್ದೇವೆ. ಆದಕ್ಕೆ ನಾವು ಸಾಕಷ್ಟು ಸಿಬ್ಬಂದಿಗಳನ್ನು ಮತ್ತು ಡಾಕ್ಟರ್‌ಗಳನ್ನು ಬೇರೆ ಬೇರೆ ಕಡೆಯಿಂದ we will re-deploy ಅಲ್ಲಿಗೆ ನಾವು ಕಳುಹಿಸುತ್ತೇವೆ. ನಾವು ಸಮರೋಪಾದಿಯಲ್ಲಿ ಆ ಕಾರ್ಯಕ್ರಮವನ್ನು ಜರುಗಿಸುತ್ತೇವೆ. ಇನ್ನು ಮಂಗನ ಕಾಯಿಲೆ ಬಗ್ಗೆ ನಾವು ಈಗಾಗಲೇ ಕಾರ್ಯಕ್ರಮವನ್ನು ತೀರ್ಥಹಳ್ಳಿಯಲ್ಲಿ ತೆಗೆದುಕೊಂಡಿದ್ದೇವೆ. we will prevent it. ಆಮೇಲೆ ವೀರಪ್ಪನನ್ನು 20 ದಿವಸದಲ್ಲಿ ಹಿಡಿಯುತ್ತೇವೆ ಎಂದು ನನ್ನ ಸ್ಟೇಟ್‌ಮೆಂಟ್ ಅಲ್ಲ. ನಾನು ಏನು ಹೇಳಿದೆ ಈ ವಿಚಾರ ಬಂದಾಗ, ಸ್ವಲ್ಪ ಕಾದುನೋಡಿ ಹತ್ತಿಪ್ಪತ್ತು ದಿವಸದಲ್ಲಿ we are streamlining ಆ ತರಹ ಹೇಳಿದೆ. I never said like that. ಏಕೆಂದರೆ ಪತ್ರಿಕೆಯಲ್ಲಿ ಆ ಅಭಿಪ್ರಾಯ ಬರಬಾರದು. We cannot give a deadline like that ನಾನು ಏನು ಹೇಳಿದೆ ಎಂದರೆ ಹತ್ತಿಪ್ಪತ್ತು ದಿವಸ ಕಾದು ನೋಡಿ ಎಂದು ಹೇಳಿದೆ. ಅದಕ್ಕೆ ಕಾರಣ ಇದೆ. I do not want to disclose. ಆ ರೀತಿ ಡೆಡ್ ಲೈನ್ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ:-ಆ ರೀತಿಯ ಅಭಿಪ್ರಾಯ ಬಂತು. ಆದರೆ ನಾನು ಏನು ತಿಳಿದುಕೊಂಡೆ, ಯಾವ ಪ್ರಕಾರ ವಿಪಿ ಸಿಂಗ್ ಅಲ್ಲಿ ಡಕಾಯಿತಿ ಸರೆಂಡರ್ ಮಾಡಿಕೊಂಡು ಹಾಕಿದರು ಇಲ್ಲಿ, ವೀರಪ್ಪನ್ ಬಂದು ಸರೆಂಡರ್ ಆಗುತ್ತಿದ್ದಾನೆ ಎಂದು ಹೇಳಿ ಪ್ಲಾನ್ ನಡೆಯುತ್ತಿದೆ ಎಂದು ಅನಿಸಿಕೆ ಆಯಿತು.

ಶ್ರೀ ವಾಟಾಳ್ ನಾಗರಾಜ್:-ಮಾನ್ಯ ದೇಶಪಾಂಡೆಯವರು ಏನು ಹೇಳಿದರು ಎಂದರೆ ಹತ್ತಿಪ್ಪತ್ತು ದಿವಸ ಎಂದ ತಕ್ಷಣ ನನ್ನ ಹತ್ತಿರ ಏನು ಹೇಳಿದರು, ಬಂದು ಅವನು ಸರೆಂಡರ್ ಆಗುತ್ತೇನೆ ಎಂದು ಹೇಳಿದ್ದಾನೆ. ಏನೋ ಅದನ್ನು ನಾನು ನಿಜ ಎಂದು ನಂಬಿದೆ. ಆ ರೀತಿ ಎನಾದರೂ ಇದೆಯೇ ಹೇಳಿ. ಎಲ್ಲಿಯಾದರೂ ಅವನನ್ನು ತಂದಿಟ್ಟು ಕೊಂಡಿದ್ದೀರಾ? ಏನಾದರೂ ಮಾಹಿತಿ ಇದೆಯೇ? ಮಾಹಿತಿ ಇದ್ದರೆ ಹೇಳಿ.

ಶ್ರೀ ಬಿ.ಹೆಚ್.ಬನ್ನಿಕೊಡ್:- ಕೆಲವು ವೀರಪ್ಪನ್‌ಗಳು ಮಾತ್ರ ಸರೆಂಡರ್ ಆಗಿರುವುದು ಖರೆ ಎಂದು ಹೇಳಿದ್ದಾರೆ.

ಶ್ರೀ ಎಂ.ವೀರಪ್ಪಮೊಯಿಲಿ:-ಇದರ ಬಗ್ಗೆ ಡೆಡ್ ಲೈನ್ಸ್ ಕೊಡುವುದಕ್ಕಾಗುವುದಿಲ್ಲ. ಡೆಡ್ ಲೈನ್ ಕೊಡತಕ್ಕಂಥದ್ದು ತಪ್ಪು it is a matter of strategy.

ಒಂದು ತಂತ್ರ ಅಷ್ಟೆ. ಇದಕ್ಕೆ ಕಾರಣ ಇದೆ. ನಾನು ಹತ್ತಿಪ್ಪತ್ತು ದಿವಸದಲ್ಲಿ ಕಾದು ನೋಡಿ ಎಂದು ಹೇಳಿದ್ದಕ್ಕೆ ಕಾರಣ ಇದೆ. we have taken some steps, that I can't tell you ಅದು .ಯಾವ ಹೆಜ್ಜೆ ತೆಗದುಕೊಂಡಿದ್ದೇವೆ ಎಂದು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. That I can't tell ಅಷ್ಟೆ. ಆ ವಿಚಾರವನ್ನು ಮಾತ್ರ ಹೇಳಿದೆನೆ ಹೊರತು, ಬೇರೆ ಅಲ್ಲ ಪ್ರವೋಕೇಷನ್ ಮೇಲೆ ಮತ್ತೆ ಸಡೆನ್ ಆಗಿ ಕೊಟ್ಟಂಥ ಸ್ಟೇಟ್‌ಮೆಂಟ್ ಅಲ್ಲ. ಅದಕ್ಕೆ ಒಂದು ಹಿನ್ನೆಲೆ ಇತ್ತು. ಅದಕ್ಕೆ ನಾನು ಹೇಳಿದ್ದೇನೆ ಅಷ್ಟೆ. ಏಕೆಂದರೆ ಜನಗಳ ತಮ್ಮ ಅಭಿಪ್ರಾಯಕ್ಕೆ ಆಗಲಿ ಅಥವಾ ಸಾರ್ವಜನಿಕರ ಅಭಿಪ್ರಾಯದಲ್ಲಿ ನಾವು ಏನೂ ಹೆಜ್ಜೆ ತೆಗೆದುಕೊಳ್ಳುತ್ತಿಲ್ಲ ಎಂಬ ಭಾವನೆ ಬರಬಾರದು ಅಷ್ಟೇ. ಆ ಮೇಲೆ ಈಗ ಪ್ರಮುಖವಾಗಿ ತಾವು ಏನು ಅಫ್‌ಜಲ್‌ಪುರದ್ದು ವಿಚಾರ ಎತ್ತಿದ್ದೀರಿ, ಮೈಸೂರು ಬಾಂಬ್ ಅದು ಕಂಟ್ರಿ ಮೇಡ್ ಬಾಂಬ್. ಕೆಲವು ಕಿಡಿಗೇಡಿಗಳು ಒಂದು ತರಹ ಕೀಟಲೆ ಮಾಡುವುದಕ್ಕೆ ಮಿಸ್‌ಚೀಫ್ ಮಾಡಲಿಕ್ಕೆ ಇದನ್ನು ಉಪಯೋಗ ಮಾಡಿಕೊಂಡಿರಬೇಕು. ಏಕೆಂದರೆ ಅಸ್ತಿ ನಷ್ಟ ಆಗಲಿಲ್ಲ, ಯಾವ ಪ್ರಾಣ ಕೂಡ ನಷ್ಟ ಆಗಲಿಲ್ಲ, ಗಾಯ ಕೂಡ ಆಗಲಿಲ್ಲ. ಆದರೆ ನಾವು ಇದನ್ನು ಗಂಭೀರವಾಗಿ ಪರಿಶೀಲನೆ ಮಾಡುತ್ತೇವೆ. ಏಕೆಂದರೆ ಇಂತಹ ಎಕ್ಸ್‌ಪ್ಲೋಸೀವ್ಸ್‌ನ್ನು ಎಲ್ಲಿ ತಯಾರು ಮಾಡುತ್ತೇವೆ, ಎಲ್ಲಿಂದ ಬರುತ್ತಾ ಇದೆ ಎಂಬುದನ್ನು ನಾವು ವಿಚಾರ ಮಾಡುತ್ತಿದ್ದೇವೆ. ಯಾರು ಅದನ್ನು ಸ್ಟಾಕ್ ಮಾಡಿದರೆ ನಾವು ಬಿಡುವುದಿಲ್ಲ. They will have their time.

ಆದ್ದರಿಂದ ಇದರ ಬಗ್ಗೆ ಹೆಜ್ಜೆ ತೆಗೆದುಕೊಳ್ಳುತ್ತೇವೆ. ಯಾರೂ ಕೂಡ ಈ ತರಹ ಮಿಸ್ ಚೀಫ್ ಮಾಡಿಕೊಂಡು, ಪ್ರಯೋಗ ಮಾಡಿಕೊಂಡು ಇರುವುದಕ್ಕೆ ಆಗುವುದಿಲ್ಲ.ಅದರ ಬಗ್ಗೆ ಸೂಕ್ತ ಕಾರ್ಯಕ್ರಮ ಈಗಾಗಲೇ ನಾವು ತೆಗೆದುಕೊಂಡಿದ್ದೇವೆ. ಇವತ್ತು ಬೆಳಿಗ್ಗೆ 5.15ಕ್ಕೆ ಒಂದು ಕಂಟ್ರಿ ಅಂತಹ ಬಾಂಬ್ ಸ್ಫೋಟ ಆಗಿದೆ ಮತ್ತು ಮೊನ್ನೆ ಕೂಡ ಅಂಥದ್ದು ಆಗಿದೆ. ಅದಕ್ಕೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಕೆಲವು ವಿಚಾರ,ಅಫ್‌ಜಲ್‌ಪುರ ತಾಲ್ಲೂಕಿನ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದೀರಿ ಬೆಳಿಗ್ಗೆ. ಇದರ ಬಗ್ಗೆ ಹಿಂದಿನ ವಿವರಗಳು ನನ್ನ ಹತ್ತಿರ ಸ್ಪಷ್ಟವಾಗಿ ಇರಲಿಲ್ಲ. ಆದ್ದರಿಂದ ಅದನ್ನು ತರಿಸಬೇಕು ಎಂದು ಹೇಳಿ ನಾನು 12 ಗಂಟೆ ಮೇಲೆ ಹೇಳಿಕೆ ಕೊಡುತ್ತೇನೆಂದು ಹೇಳಿದ್ದೆ. ಅಲ್ಲಿ ಹಿಂದಿನ ಮಾಹಿತಿ, ಇದೆ. ದೇವಳಗಾವ್‌ದ ಸಿದ್ದಪ್ಪ ಬೋರ್ಗಿ ಅವರ ಕುಟುಂಬಕ್ಕೂ ಅಫ್‌ಜಲ್‌ಪುರದ ಮಾಣಿಕ್ಯ ಮಾಸ್ತರ ಅವರ ಕುಟುಂಬಕ್ಕೂ ಬಹಳ ವರ್ಷಗಳಿಂದ ವೈಮನಸ್ಯ ಬೆಳೆದು ಬಂದಿತ್ತು. 1984ರಲ್ಲಿ ಶರಣಪ್ಪ ಬೋರ್ಗಿ ಎಂಬುವರ ಕೊಲೆಯಾಯಿತು. ಜಮೀನುಗಳ ಗಡಿಯ ವ್ಯಾಜ್ಯವೇ ಇದಕ್ಕೆ ಕಾರಣ. ಈ ಕೊಲೆಯ 6 ತಿಂಗಳ ನಂತರ ಮೃತ ಶರಣಪ್ಪ ಬೋರ್ಗಿಯವರ ಮಗ ಸಿದ್ದಪ್ಪ ಬೋರ್ಗಿಯನ್ನು ಆಪಾದಿತರಾದ ನಿಂಗೇ ಗೌಡ ಮತ್ತಿತರನ್ನು ಕೊಲೆ ಮಾಡಲು ಪ್ರಯತ್ನಿಸಿದರು. ನಂತರ ಬೋರ್ಗಿ ಸಿದ್ದಪ್ಪನು ಜೂಜುಕಟ್ಟೆಯೊಂದನ್ನು 85ರಲ್ಲಿ ಪ್ರಾರಂಭಿಸಿದ್ದು, ಮಾಣಿಕ್ಯ ಮಾಸ್ತರ ಅವರ ಮಗ ಬಸವರಾಜು ಅವರಿಂದ ಜೂಜಾಟಕ್ಕೆ ಬೋರ್ಗಿ ಸಿದ್ದಪ್ಪ, 10,000ರೂ ಸಾಲ ತೆಗೆದುಕೊಂಡರು. ಇದನ್ನು ಹಿಂತಿರುಗಿಸುವ ಪ್ರಶ್ನೆಯಿಂದ ಶತೃತ್ವ ಜಾಸ್ತಿಯಾಯಿತು. 1990ರಲ್ಲಿ ಮಾಣಿಕ್ಯ ಮಾಸ್ತರರನ್ನು ಕೊಲೆ ಮಾಡುವ ಪ್ರಯತ್ನವೂ ನಡೆಯಿತು. ಸಿದ್ದಪ್ಪ ಬೋರ್ಗಿ ಮತ್ತು ಇತರ 5 ಜನರ ಮೇಲೆ

92:91ರಲ್ಲಿ ಪ್ರಕರಣ ದಾಖಲಾಯಿತು. ಇದು ನಡೆದುದು 1.1.90ರಂದು 10.1.90ರಂದು ಮಾಣಿಕ್ಯ ಮಾಸ್ತರರು ಮತ್ತು ಇತರರು ಸೇರಿ ಬೋರ್ಗಿ ಸಿದ್ದಪ್ಪನನ್ನು ಕೊಲೆ ಮಾಡಿದರು. ಹೀಗೆ ವೈಮನಸ್ಯವು ಅನೇಕ ವರ್ಷದಿಂದ ಈ ಎರಡು ಕುಟುಂಬಗಳ ನಡುವೆ ಸತತವಾಗಿ ನಡೆದು ಬಂದಿದ್ದು ಕೊಲೆ ಹಾಗೂ ಕೊಲೆಯ ಪ್ರಯತ್ನಗಳಿಗೆ ಕಾರಣವಾಗಿ ಅನೇಕ ಪ್ರಕರಣಗಳು ದಾಖಲಾಗಿ ತನಿಖೆಯಾಗಿದೆ. ಇನ್ನು ಇತ್ತೀಚಿಗೆ ದಿನಾಂಕ 20-2-93 ರಂದು ಮಧ್ಯಾಹ್ನ 1-00 ಘಂಟೆ ಸಮಯದಲ್ಲಿ ಫಿರ್ಯಾದಿ ಅಫಜಲ್‌ಪುರ ತಾಲ್ಲೂಕು ಸೊನ್ನ ಗ್ರಾಮದ ಶ್ರೀ ಚಂದ್ರಕಾಂತ, ತಂದೆ ಸಾಯಬಣ್ಣ ತಳವಾರ ಇವರು ಅಫಜಲ್‌ಪುರ ಪೊಲೀಸ್ ಠಾಣೆಗೆ ಹಾಜರಾಗಿ, ದಿನಾಂಕ 20-2-93 ರಂದು ಮಧ್ಯಾಹ್ನ 12-30 ಘಂಟೆಯಲ್ಲಿ ಅಫಜಲ್‌ಪುರದಲ್ಲಿ ನರ್ತಕಿ ಬಾರ್ ಸಮೀಪದಲ್ಲಿ ಅಪರಾಧಿಗಳಾದ ಶ್ರೀ ಶಿವಪ್ಪ, ತಂದೆ ಶರಣಪ್ಪ, (2) ಲೋರ್ಗಿಕಾಶಪ್ಪ, ತಂದೆ ಸಿದ್ದಪ್ಪ, (3) ಚಂದ್ರಪ್ಪ, ತಂದೆ ಶರಣಪ್ಪ, (4) ಹರಿಜನ ಶ್ರೀಮತ ನಾಗೂರ್ ಮತ್ತಿತರೆ 5 ಜನರು ಕಾರು ಮತ್ತು ಜೀಪುಗಳಿಂದ ನರ್ತಕಿ ಬಾರ್ ಹತ್ತಿರಕ್ಕೆ ಪಕ್ಕದ ಅಡ್ಡರಸ್ತೆ ಮತ್ತು ಗಲ್ಲಿಗಳಿಂದ ಬಂದು, ರಿವಾಲ್ವರ್ ಮತ್ತು 12 ಬೋರ್ ಬಂದೂಕದಿಂದ (1)ಶ್ರೀ ಬಸವರಾಜ, ಯುವರಾಜ್, ಪಂಡಿತ, ಸಗಿಯಪ್ಪ, ತಳವಾರ ಚಂದ್ರಕಾಂತ ಎಂಬುವವರಿಗೆ ಗುಂಡು ಹಾರಿಸಿ ಕೊಲೆ ಮಾಡಿದುದಾಗಿಯೂ, ಅದಕಾರಣ, ಬಸವರಾಜು, ಯುವರಾಜು, ಪಂಡಿತ ಮತ್ತು ಚಂದ್ರಕಾಂತ ಇವರುಗಳು ಸ್ಥಳದಲ್ಲೇ ಮೃತಪಟ್ಟರುವುದಾಗಿಯೂ ದೂರು ನೀಡಿದ್ದಾರೆ. ಈ ಫಿರ್ಯಾದಿನ ಮೇಲೆ ಅಫ್‌ಜಲ್‌ಪುರ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:18:93 ಕಲಂ 143-147-148-302 ಭಾ.ದಂ.ಸಂ. ಜೊತೆಗೆ ಕಲಂ 27(ಬಿ) ಇಂಡಿಯನ್ ಆರ್ಮ್ಸ್ ಪ್ರಕಾರ ಪ್ರಕರಣವನ್ನು ನೊಂದಾಯಿಸಿಕೊಂಡು ತನಿಖೆ ನಡೆಸಿದೆ. ತನಿಖೆಯ ಕಾಲದಲ್ಲಿ ಕೃತ್ಯ ನಡೆದ ಸ್ಥಳದಿಂದ ಎರಡು ಖಾಲಿ 12 ಬೋರ್ ಕಾರ್ಟಿಡ್ಜ್, ಒಂದು.. 32 ಕಾರ್ಟಿಡ್ಜ್ ಮತ್ತು ನಾಲ್ಕು..380 ಖಾಲಿ ಕಾರ್ಟಿಡ್ಜ್‌ಗಳನ್ನು ವಶಪಡಿಸಿಕೊಂಡಿದೆ. ಈ ಕೊಲೆಗಳಿಗೆ ಸಿಂಧಗಿ ತಾಲ್ಲೂಕು ದೇವಗಾಂವ್ ಗ್ರಾಮದ ಶ್ರೀ ಸಿದ್ದಪ್ಪ ಬೋರ್ಗಿ ಮತ್ತು ಅಫಜಲ್‌ಪುರ ತಾಲ್ಲೂಕು ಸೊನ್ನ ಗ್ರಾಮದ ಶ್ರೀ ಮಾಣಕಪ್ಪ ಮಾಸ್ತರ್ ಇವರ ನಡುವಿನ ಹಿಂದಿನ ವೈಷಮ್ಯವೇ ಕಾರಣ ಎಂದು ತಿಳಿದು ಬಂದಿದೆ. ಕೊಲೆಗೆ ಬಂದೂಕ ಮತ್ತು ರಿವಾಲ್ವರ್‌ಗಳನ್ನು ಉಪಯೋಗಿಸಿದ ಸಾಕ್ಷಿ ಆಧಾರಗಳಿವೆ. 4 ಮೃತ ದೇಹಗಳನ್ನು ಅಫ್‌ಜಲ್‌ಪುರ ಸರ್ಕಾರಿ ಆಸ್ಪತ್ರೆಗೆ ಸಾಗಿಸಿ, ವೈದ್ಯಾಧಿಕಾರಿಗಳವರಿಂದ ಮರಣೋತ್ತರ ಶವಪರೀಕ್ಷೆ ಮಾಡಿಸಲಾಗಿದೆ. ಅನಂತರ ಮೃತದೇಹಗಳನ್ನು ವಾರಸುದಾರರ ವಶಕ್ಕೆ ಶವಸಂಸ್ಕಾರಕ್ಕೆ ಒಪ್ಪಿಸಿದೆ.

ಈ ಪ್ರಕರಣದ ತನಿಖೆಯನ್ನು ಆಳಂದ ಪೊಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟ್‌ರವರಿಗೆ ವಹಿಸಿದೆ. ಅಪರಾಧಿಗಳನ್ನು ದಸ್ತಗಿರಿ ಮಾಡಲು ಆಳಂದ ಸಿ.ಪಿ.ಐ.ರವರ ನೇತೃತ್ವದಲ್ಲಿ ಒಂದು ವಿಶೇಷ ದಳವನ್ನು ರಚಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಪಟ್ಟ 9 ಜನ ಅಪರಾಧಿಗಳು ಅಂದರೆ, (1) ಶಿವಪ್ಪ ಅಲಿಯಾಸ್ ಶಿವಾಜಿ, ತಂದೆ ಶರಣಪ್ಪ ಬೋರ್ಗಿ, (2) ಕೇಶಪ್ಪ, ತಂದೆ ಸಿದ್ದಪ್ಪ ತವರಖೇಡ್, (3) ಚಂದ್ರಪ್ಪ, ತಂದೆ ಶರಣಪ್ಪ ಹರಿಜನ, (4) ಶಿವಪ್ಪ, ತಂದೆ ಬಸವಣ್ಣ, (5) ಶ್ರೀಮಂತ ಹಿರಾಪುರ್ ಇವರೆಲ್ಲ ಸಿಂಧಗಿ ತಾಲ್ಲೂಕು ದೇವಗಾಂವ್ ಗ್ರಾಮದವರು ಮತ್ತು ಇತರೆ 4 ಜನರು ಕೊಲೆ ಮಾಡಿ ತಲೆತಪ್ಪಿಸಿಕೊಂಡು ಹೋಗಿರುತ್ತಾರೆ. ಇತರೆ 4 ಜನ ಅಪರಾಧಿಗಳ ಹೆಸರು ತಿಳಿದಿಲ್ಲ. ಈ ಬಗ್ಗೆ ತನಿಖೆ ನಡೆಯುತ್ತಿದ್ದು, ಅವರುಗಳ ಹೆಸರು ಮತ್ತು ವಿಳಾಸಗಳನ್ನು ಪಡೆಯುವ ಮತ್ತು ಬಂಧಿಸುವ ಪ್ರಯತ್ನ ನಡೆಯುತ್ತಿದೆ. ಶ್ವಾನದಳ ಮತ್ತು ಬೆರಳಚ್ಚು ತಜ್ಞರ ಸೇವೆಯನ್ನು ಬಳಸಿಕೊಳ್ಳಲಾಗಿದೆ. ಅಪರಾಧಿಗಳ ಪೈಕಿ ಒಬ್ಬನಾದ ಬಸವರಾಜ, ತಂದೆ ಮಾಣಿಕಪ್ಪ ಎಂಬುವವನು ಈ ಹಿಂದೆ ಬಿಜಾಪುರ ಜಿಲ್ಲೆಯಲ್ಲಿ ಕೊಲೆಯಾದ ಚೌಡಪ್ಪಗೌಡ ಎಂಬುವವರ ಪ್ರಕರಣದಲ್ಲಿ ಅಪರಾಧಿಯಾಗಿರುತ್ತಾನೆ. ಈ ಪ್ರಕರಣವು ಅಫಜಲ್‌ಪುರ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:46:91 ಕಲಂ 147-148-365-307-302-149 ಭಾ.ದಂ.ಸಂ. ಜೊತೆಗೆ 25(ಬಿ) ಇಂಡಿಯನ್ ಆರ್ಮ್ಸ್ ಆಕ್ಟ್‌ನಲ್ಲಿ ಬಿಜಾಪುರ ಸತ್ರ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. ಈ ಕೇಸಿನ ಇನ್ನೂ ಇಬ್ಬರು ಅಪರಾಧಿಗಳು ಅಫಜಲ್‌ಪುರ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:46:91ರಲ್ಲಿ ಅಪರಾಧಿಗಳಾಗಿರುತ್ತಾರೆ. ಗುಲ್ಬರ್ಗಾ

ಅಡಿಷನಲ್ ಪೊಲೀಸ್ ಸೂಪರಿಂಟೆಂಡೆಂಟ್‌ರವರು ಈ ಪ್ರಕರಣದ ತನಿಖೆಯ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಅಫಜಲ್‌ಪುರ ಗ್ರಾಮದಲ್ಲಿ ಸಾಕಷ್ಟು ಪೊಲೀಸ್ ಬಂದೋಬಸ್ತ್ ಮತ್ತು ಗಸ್ತು ನೇಮಿಸಿದ್ದು, ಪರಿಸ್ಥಿತಿ ಶಾಂತವಾಗಿದೆ.

ಅಫಜಲ್‌ಪುರದಲ್ಲಿ ಜನಸಾಮಾನ್ಯರಿಗೆ ಈಗ ಭಯದ ವಾತಾವರಣ ಇರುವುದಿಲ್ಲ. ಪೊಲೀಸಿನವರು ಅಪರಾಧಿಗಳನ್ನು ದಸ್ತಗಿರಿ ಮಾಡಲು ಸರ್ವ ಪ್ರಯತ್ನ ನಡೆಸುತ್ತಿದ್ದಾರೆ. ತನಿಖೆಯಲ್ಲಿ ಯಾವ ಒತ್ತಡವೂ ಇರುವುದಿಲ್ಲ ಮತ್ತು ನಿಷ್ಪಕ್ಷಪಾತವಾದ ತನಿಖೆಯು ನಡೆಯುತ್ತಿದೆ. ಶೀಘ್ರದಲ್ಲೇ ಅಪರಾಧಿಗಳನ್ನು ದಸ್ತಗಿರಿ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.

ಇದೊಂದು ರೀತಿಯಲ್ಲಿ ಸೀರೀಸ್ ಆಫ್ ಮರ್ಡರ್ಸ್ ಈ ಜಾಗದಲ್ಲಿ ಆಗುತ್ತಿದೆ. ಇದರಿಂದ ಗೃಹ ಖಾತೆಗೆ, ಪೊಲೀಸ್ ಇಲಾಖೆಗೆ ಮತ್ತು ಅಲ್ಲಿನ ಸಾರ್ವಜನಿಕರಿಗೆ ಇದೊಂದು ವಿಶೇಷವಾದ ತಲೆನೋವಾಗಿ ಪರಿಣಮಿಸಿದೆ. ಏಕೆಂದರೆ, ಇದು ಕೊಲೆಯಾಗುತ್ತದೆ, ಪ್ರತಿಯಾಗಿ ಇನ್ನೊಂದು ಸೀರಿಸ್ ಆಗುತ್ತದೆ. ಇಂತಹ ಘಟನೆಗಳಾಗಬಾರದು. ಇಂತಹ ಪರಿಸ್ಥಿತಿ ಮುಂದೆ ಬಾರದಂತೆ ಪೂರ್ತಿ ತಡೆಹಿಡಿಯಬೇಕೆಂಬ ಉದ್ದೇಶ ಕೂಡ ಸರ್ಕಾರಕ್ಕಿದೆ. ದಿನಾಂಕ 22.3.1993 ರಂದು ಕೊಲೆಯ ಘಟನೆ ನಡೆಯಿತು. ಇದರ ತನಿಖೆಗಾಗಿ ಸಿಓಡಿಗೆ ನಾವು ಒಪ್ಪಿಸುತ್ತಿದ್ದೇವೆ. ಈ ಹಿಂದೆಯೂ ಕೂಡ ಅನೇಕ ಸೀರೀಸ್ ಆಫ್ ಮರ್ಡರ್ಸ್ ಆಗಿದ್ದು, ಇದಕ್ಕೆ ಸಾಕಷ್ಟು ಹಿನ್ನೆಲೆ ಇದ್ದು, ಇಂತಹ ಘಟನೆಗಳು ಮುಂದೆ ಜರುಗದ ರೀತಿಯಲ್ಲಿ ತಡೆಹಿಡಿದು ನಿಲ್ಲಿಸುವುದಕ್ಕೆ ನಾವು ಕಟ್ಟುನಿಟ್ಟಿನ ಕಠಿಣ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದ, ಈ ಘಟನೆಯನ್ನು ಸಿಓಡಿಗೆ ಇನ್‌ವೆಸ್ಟಿಗೇಷನ್‌ಗಾಗಿ ಒಪ್ಪಿಸುತ್ತಿದ್ದೇವೆ. The earlier incident we are referring to C.O.D., to enquire into the background and other things, The latest incident, we are referring to C.O.D., for investigation. ಅದರ ಸತ್ಯಾಂಶ ಹೊರಬರಲಿ ಮತ್ತು ಇನ್ನು ಮುಂದೆ ಇಂತಹ ದುರ್ಘಟನೆಗಳು ಆ ಪ್ರದೇಶದಲ್ಲಿ ನಡೆಯದಂತೆ ಎಲ್ಲಾ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ನಾವು ಪೋಲೀಸ್ ಅಧಿಕಾರಿಗಳಿಗೆ ತಿಳಿಸಿದ್ದೇವೆ.

They should not be taken for a ride by anyone or they should not have any laxity. ಯಾರು ಡಿವೈಎಸ್‌ಪಿ ಅಳಂದದಲ್ಲಿದ್ದರು, ಅವರನ್ನು ಈಗಾಗಲೇ ಅಮಾನತುಗೊಳಿಸಲಾಗಿದೆ. ಪೋಲೀಸ್ ಅಧಿಕಾರಿಗಳು ಲಾ ಇನ್‌ಫೋರ್ಸಿಂಗ್ ಏಜೆಂಟ್ ಆಗಿ ಕೆಲಸ ಮಾಡಬೇಕೇ ಹೊರತು ಈ ರೀತಿ ಕಾನೂನು ಭಂಗ ಮಾಡತಕ್ಕಂಥ ರೀತಿಯಲ್ಲಿ ಪ್ರವೃತ್ತಿ ತಳೆದು ಪ್ರಚೋದನೆ ಕೊಟ್ಟು ನಿರ್ಲಕ್ಷ್ಯತನದಿಂದ ವರ್ತಿಸಿದರೆ ಅಂತಹ ಅಧಿಕಾರಿಗಳ ಮೇಲೆ ನಾವು ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ಇನ್ನು ಮುಂದೆ ಯಾವುದೇ ರೀತಿಯಲ್ಲೂ ಕೂಡ ಇಂತಹ ಘಟನೆಗಳು ಜರುಗದಂತೆ ಅಲ್ಲಿರತಕ್ಕಂಥ ಪೋಲೀಸ್ ಅಧಿಕಾರಿಗಳು ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. I will hold them responsible, accountable, If anything hapens, if there is any negligence, we are not going to tolerate.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಮುಖ್ಯಮಂತ್ರಿಯವರು ಈ ಘಟನೆಯ ತನಿಖೆಗಾಗಿ ಸಿಓಡಿಗೆ ಒಪ್ಪಿಸಿರುವುದು ಸಂತೋಷವಾಗಿದೆ. ಏಕೆಂದರೆ, ನಿಜವಾದ ಸತ್ಯ ಹೊರಗೆ ಬರಬೇಕೆಂಬುದೇ ನಮ್ಮ ಉದ್ದೇಶವಿದೆ. ಅದೇ ರೀತಿ ಅಳಗಿಯಲ್ಲಿ ಮೂರು ಜನ ಪರಿಶಿಷ್ಟ ಜನಾಂಗಕ್ಕೆ ಸೇರಿದವರ ಕೊಲೆಯಾಯಿತಲ್ಲ, ಅದನ್ನು ಕೂಡ ಸಿಓಡಿಗೆ ಒಪ್ಪಿಸಬೇಕು. ಅನಂತರ ಗೌಡಪ್ಪ ಪಾಟೀಲ ಎಂಬ 1989ರ ವಿಧಾನಸಭೆ ಚುನಾವಣಾ ಅಭ್ಯರ್ಥಿ ದಿನಾಂಕ 1.6.91ರಂದು ಕೊಲೆಯಾಗಿದ್ದಾರೆ, ಅಲ್ಲದೆ, ಗಂಗಯ್ಯಸ್ವಾಮಿ ಎಂಬುವವರ ಕೊಲೆಯೂ ಸಹ ಆಗಿದೆ. ಈ ಎಲ್ಲಾ ಕೊಲೆಗಳ ಘಟನೆಗಳ ತನಿಖೆಗಾಗಿ ಸಿಓಡಿಗೆ ಒಪ್ಪಿಸಬೇಕೆಂದು ತಮ್ಮಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ ಏಕೆಂದರೆ, ಇದರ ಬಗ್ಗೆ ಸಮಗ್ರವಾಗಿ ವಿಚಾರಣೆ ನಡೆಸಲಾಗುವುದೆಂದು ಹೇಳಿದಿರಿ, ತುಂಬಾ ಸಂತೋಷ. ಎರಡನೆಯದಾಗಿ, ಸಿಂಧಗಿ ತಾಲ್ಲೂಕಿನ ಅಲಮೇಲು ಪೋಲೀಸ್ ಠಾಣೆಯ ಪೋಲೀಸರು

truck loads of sachets ಹಿಡಿದಿದ್ದಾರೆ. ಇದರಿಂದ ಅಲ್ಲಿರುವ ಪಿಎಸ್‌ಐಗೆ 'ಮಾಲನ್ನು ಬಿಡುಗಡೆ ಮಾಡಬೇಕು, ಕೇಸನ್ನು ರಿಜಿಸ್ಟಾರ್ ಮಾಡಬಾರದು' ಎಂದು ಬೇದರಿಕೆ ಒಡ್ಡುತ್ತಿದ್ದಾರೆ. ಆದುದರಿಂದ, ಅದರ ಬಗ್ಗೆ ತಾವು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ.ವೀರಪ್ಪಮೊಯಿಲಿ:- ನಮ್ಮ ಸರ್ಕಾರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕಂಥ ಅಧಿಕಾರಿಗೆ ಶಹಬಾಷ್ ಎಂದು ಹೇಳುತ್ತೇವೆ. ಅಂಥ ಕಡೆ ಸರ್ಕಾರ ಕೈ ಹಾಕತಕ್ಕ ಪ್ರಶ್ನೆಯೇ ಇಲ್ಲ. ಆದರೆ ಎಲ್ಲಿ ಕಾನೂನನ್ನು ಕೈಯಲ್ಲಿ ಇಟ್ಟುಕೊಂಡು ಪ್ರಾಮಾಣಿಕವಾಗಿ ರಕ್ಷಣೆ ಮಾಡದೆ ಸ್ವಾರ್ಥತೆಯಿಂದ ಅಧಿಕಾರವನ್ನು ನಡೆಸುತ್ತಾರೋ ಅಂಥ ಅಧಿಕಾರಿಗಳಿಗೆ ನಮ್ಮಲ್ಲಿ ಖಂಡಿತಾ ರಕ್ಷಣೆ ಇಲ್ಲ.

ಉಪಾಧ್ಯಕ್ಷರು:- ಈಗ ಸಭೆಯು ಮುಕ್ತಾಯಗೊಂಡು ಪುನಃ 5ನೇ ಸೋಮವಾರ ಬೇಳಿಗ್ಗೆ 11 ಗಂಟೆಗೆ ಸೇರುತ್ತದೆ.

(ಸದನವು 2-50ಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 5ನೇ ಸೋಮವಾರ ಬೆಳಿಗ್ಗೆ 11-00 ಗಂಟೆಗೆ ಸೇರಲು ನಿರ್ಧರಿಸಿತು:)

+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.